**ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**
**ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ (ಒ), ಹೆಬ್ಬಾಳ, ಬೆಂಗಳೂರು-560094**

**ಡಾ: ಕೆ.ಬಿ.ರಾಜಣ್ಣ** Tel. & Fax No: 080-23516451
**ಸಹಪ್ರಾಧ್ಯಾಪಕರು & ಮುಖ್ಯಸ್ಥರು** Email : fricbangalore@gmail.com

ಸಂಖ್ಯೆ: ಮೀ.ಸಂ.ಮಾ.ಕೇ.(ಒ)ಹೆ/ಹಪ್ರ/**39** /2023-24 ದಿನಾಂಕ:05-09-2023

# ತೆಂಗಿನ ಮರಗಳ ಫಸಲನ್ನು ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೆಬ್ಬಾಳದಲ್ಲಿರುವ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ (ಒ), ಕ.ಪ.ಪ.ಮೀ.ವಿ.ವಿ., ಈ ಕೇಂದ್ರದ ಹದ್ದು ಬಸ್ತಿನಲ್ಲಿ ಬೆಳೆದಿರುವ ತೆಂಗಿನ ಮರಗಳಲ್ಲಿ ಬಿಟ್ಟಿರುವ ತೆಂಗಿನ ಫಸಲನ್ನು, **ದಿನಾಂಕ 20–09–2023** ರಂದು **ಬೆಳ್ಳಿಗ್ಗೆ 11.00 ಘಂಟೆಗೆ** ಸಮಿತಿ ಸದ್ಯಸರ ಸಮುಖದಲ್ಲಿ **ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ ಹೆಬ್ಬಾಳ, ಬೆಂಗಳೂರು** ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ಇಷ್ಟವುಳ್ಳವರು ಛಢ ಸವಾಲಿನ ಮೂಲಕ ಮೇಲ್ಕಂಡ ತೆಂಗಿನ ಫಸಲನ್ನು ಪಡೆಯಬಹುದು.

| ಕ್ರ.ಸಂ | ವಿವರ | ಮರಗಳ ಸಂಖ್ಯೆ | ನಿರ್ದಿಷ್ಠ ಅವಧಿ |
|---|---|---|---|
| 1. | ತೆಂಗಿನ ಮರಗಳು | 100 | 1 ವರ್ಷ |

**ಈ ಕೆಳಕಂಡ ಷರತ್ತುಗಳಿಗೆ ಒಪ್ಪುವವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.**

**"ಹರಾಜಿನ ನಿಯಮಗಳು/ಷರತ್ತುಗಳು"**

1. ಸವಾಲು ಮಾಡತಕ್ಕವರು ಮುಂಗಡವಾಗಿ ತೆಂಗಿನ ಫಸಲಿಗೆ ರೂ.2000=00 ಗಳನ್ನು ಠೇವಣಿಯಾಗಿ ಕೊಡಬೇಕು.
2. ಹರಾಜು ಖೈದಾದ ಕೂಡಲೇ ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು, ಇಲ್ಲದಿದ್ದರೆ ಪುನಃ ಹರಾಜಿನ ಮೂಲಕ ಬೇರೆಯವರಿಗೆ ಕೊಡಲಾಗುವುದು.
3. ಸವಾಲಿನಲ್ಲಿ ಪಡೆದ ತೆಂಗಿನ ಮರಗಳ ಫಸಲನ್ನು ದಿನಾಂಕ 21–09–2023 ರಿಂದ 20–09–2024 ರವರೆಗೆ ಕೊಯ್ಲು ಮಾಡಿಕೊಳ್ಳತಕ್ಕದ್ದು.
4. ಹರಾಜಿನ ವಿಷಯದಲ್ಲಿ ಕೇಂದ್ರದ ಅಧಿಕಾರಿಗಳ ತೀರ್ಮಾನವೇ ಅಂತಿಮ ತೀರ್ಮಾನ.
5. ಅನುತ್ತೀರ್ಣರಾದ ಬಿಡ್ಡುದಾರರಿಗೆ ಅವರು ಠೇವಣಿಯಾಗಿ ಇಟ್ಟ ಹಣವನ್ನು ಬಹಿರಂಗ ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು. ಇವರುಗಳು ಇದಕ್ಕೆ ಸಂಬಂಧಿಸಿದ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿ ಹಣವನ್ನು ವಾಪಸ್ಸು ಪಡೆಯತಕ್ಕದ್ದು.
6. ಯಾವ ಕಾರಣವನ್ನೂ ನೀಡದೆ ಬಹಿರಂಗ ಹರಾಜು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಥವಾ ಮುಂದಕ್ಕೆ ಹಾಕುವ ಹಕ್ಕನ್ನು/ಅಧಿಕಾರ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ.
7. ಬಹಿರಂಗ ಹರಾಜು ಮುಗಿದ ನಂತರ ಸಂಭವಿಸಬಹುದಾದ ನೈಸರ್ಗಿಕ ವಿಕೋಪ ಹಾಗೂ ಕಳ್ಳತನದಿಂದ ಉಂಟಾಗ ಬಹುದಾದ ನಷ್ಟಕ್ಕೆ ಅಥವಾ ಯಾವುದೇ ಕಾರಣದಿಂದ ಬೆಳೆಗೆ ನಷ್ಟವಾದಲ್ಲಿ ಈ ಕೇಂದ್ರವು ಜವಾಬ್ದಾರಿಯಗಿರುವುದಿಲ್ಲ.
8. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ತೆಂಗಿನ ಮರಗಳ ಬೆಳೆಯ ಫಸಲನ್ನು ಠೇವಣಿ ಇಡುವ ಮೊದಲೇ ಕಛೇರಿಯ ಕೆಲಸದ ವೇಳೆಯಲ್ಲಿ ಪರಿಶೀಲಿಸತಕ್ಕದ್ದು ಮತ್ತು ತದನಂತರದಲ್ಲಿ ಉದ್ಭವಿಸುವ ಯಾವುದೇ ತಕರಾರುಗಳಿಗೆ ಈ ಕೇಂದ್ರವು ಹೊಣೆಯಾಗಿರುವುದಿಲ್ಲ.
9. ಈ ಷರತ್ತುಗಳಲ್ಲಿ ನಮೂದಿಸದೇ ಇರುವ ಯಾವುದೇ ಷರತ್ತುಗಳನ್ನು ವಿಶ್ವವಿದ್ಯಾಲಯ/ಕೇಂದ್ರದ ಹಿತದೃಷ್ಟಿಯಿಂದ ವಿಧಿಸಿದಲ್ಲಿ ಪಾಲಿಸಲು ಹೆಚ್ಚಿನ ಬಿಡ್ಡುದಾರರು ಬದ್ಧರಾಗಬೇಕಾಗುತ್ತದೆ.
10. ಬಹಿರಂಗ ಹರಾಜು ಮಂಜೂರಾದ ಮೇಲೆ ಪೂರ್ತಿ ಹಣಕಟ್ಟಿದ ನಂತರವೇ ತೆಂಗಿನ ಮರಗಳ ಬೆಳೆಯನ್ನು ಬಹಿರಂಗ ಹರಾಜಿನ ಬಿಡ್ಡುದಾರರ ವಶಕ್ಕೆ ಕೊಡಲಾಗುವುದು.
11. ತೆಂಗಿನ ಮರಗಳ ಹಗಲು ಮತ್ತು ರಾತ್ರಿ ಕಾವಲಿನ ಜವಾಬ್ದಾರಿ ಯಶ್ವಸಿ ಬಿಡ್ಡುದಾರನಾಗಿರುತ್ತದೆ. ಅವರು ಕಾವಲಿಗೆ ಬೇಕಾದಷ್ಟು ಜನರನ್ನು ಮಾತ್ರ ನೇಮಿಸಿ ಅವರಿಗೆ ಗುರುತಿನ ಚೀಟಿಯನ್ನು ಕೊಡುವುದು ತೋಟದಲ್ಲಿ ದನ, ಮೇಕೆ, ಕುರಿ, ಹಂದಿ ಮತ್ತಿತರ ಯಾವುದೇ ಪ್ರಾಣಿಗಳನ್ನು ಇಟ್ಟುಕೊಳ್ಳಬಾರದು ಮತ್ತು ಮೇಯಿಸಬಾರದು.
12. ಯಶ್ವಸಿ ಬಿಡ್ಡುದಾರ ಯಾವಕಾರಣಕ್ಕೂ ತೆಂಗಿನ ಮರಗಳ ಫಸಲನ್ನು ಬೇರೆಯವರಿಗೆ ವಹಿಸಿಕೊಡಬಾರದು. ಸ್ವಾಭಾವಿಕವಾಗಿ ಫಸಲಿಗೆ ಉಂಟಾಗುವ ನಷ್ಟಕ್ಕೆ ಈ ಕೇಂದ್ರವು ಜವಾಬ್ದಾರರಲ್ಲ.

13. ಗುತ್ತಿಗೆ ಅವಧಿಯಲ್ಲಿ ಕರಾರುಗಳಿಗೆ / ಷರತ್ತಿಗೆ ವಿರುದ್ಧವಾಗಿ ನಡೆದುಕೊಂಡರೆ ಗುತ್ತಿಗೆಯನ್ನು ರದ್ದುಗೊಳಿಸಲಾಗುವುದು ಹಾಗೂ ಗುತ್ತಿಗೆದಾರರು ಕಟ್ಟಿದ ಎಲ್ಲಾ ಹಣವನ್ನು / ಭಾಗಶ: ಹಣವನ್ನು ವಿಶ್ವವಿದ್ಯಾಲಯ/ಕೇಂದ್ರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ಗುತ್ತಿಗೆದಾರರು ಮತ್ತು ವಿಶ್ವವಿದ್ಯಾಲಯ/ಕೇಂದ್ರದ ಮಧ್ಯೆ ಬರಬಹುದಾದ ತಕರಾರುಗಳಿಗೆ ಪ್ರಾಧ್ಯಾಪಕರು ಹಾಗು ಮುಖ್ಯಸ್ಥರ ತೀರ್ಮಾನವೇ ಅಂತಿಮವಾಗಿರುತ್ತದೆ.
15. ಫಸಲನ್ನು ಗುತ್ತಿಗೆದಾರರು ಸಕಾಲದಲ್ಲಿ ಮಾತ್ರಕೊಯ್ಲು ಮಾಡಬೇಕು ಮತ್ತು ಫಸಲನ್ನು ಕೊಯ್ಲುಮಾಡುವಾಗ ಮರ–ಗಿಡಗಳಿಗೆ ಮತ್ತು ಇನ್ನಿತರ ಆಸ್ತಿಗಳಿಗೆ ಯಾವುದೇ ವಿಧವಾದ ಹಾನಿಯನ್ನುಂಟು ಮಾಡಬಾರದು. ಯಾವುದೇ ಸಂದರ್ಭದಲ್ಲಿ ನಷ್ಟ ಉಂಟಾದಲ್ಲಿ ಅದನ್ನು ಗುತ್ತಿಗೆದಾರರು ವಿಶ್ವವಿದ್ಯಾಲಯ/ಕೇಂದ್ರಕ್ಕೆ ತುಂಬಿಕೊಡಬೇಕು.
16. ಯಶಸ್ವಿ ಗುತ್ತಿಗೆದಾರರು ಈ ಗುತ್ತಿಗೆಯನ್ನು ಮೇಲಿನ ಪ್ರಕಟಣೆಯಲ್ಲಿ ತಿಳಿಸಿರುವ ನಿರ್ದಿಷ್ಟ ಅವಧಿವರೆಗೆ ಮಾತ್ರ ಹೊಂದಿರುತ್ತಾರೆ. ನಂತರದ ದಿನಗಳಲ್ಲಿ ತೆಂಗಿನ ಮರಗಳ ಫಸಲನ್ನು ಕೊಯ್ಲು ಮಾಡುವ ಹಕ್ಕು ಇರುವುದಿಲ್ಲ.
17. ಕೇಂದ್ರದ ತೆಂಗಿನ ಮರಗಳ ಫಸಲನ್ನು ಕೇಂದ್ರದ ಅಧಿಕಾರಿಗಳ ಅನುಮತಿ ಪಡೆದು ಕಛೇರಿಯ ಕೆಲಸದ ವೇಳೆಯಲ್ಲಿ ಮಾತ್ರ ಸಾಗಿಸುವುದು.

ರಾಜಣ್ಣ. ಕೆ.ಬಿ.

**ಸಹ ಪ್ರಾಧ್ಯಾಪಕರು & ಮುಖ್ಯಸ್ಥರು**

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಮೀ.ಸಂ.ಮಾ.ಕೇ (ಒ)
ಕ.ಪ.ಪ.ಮೀ.ವಿ.ವಿ. 10ನೇ ಅಡ್ಡರಸ್ತೆ,
ಮಯೂರ ಬೀದಿ, ಪಾಪಣ್ಣ ಬಡಾವಣೆ,
ಹೆಬ್ಬಾಳ ಹೊರವರ್ತುಲ ರಸ್ತೆ, ಬೆಂಗಳೂರು-94.

**ಪ್ರತಿಯನ್ನು:**

1. ಸಂಶೋಧನಾ ನಿರ್ದೇಶಕರು, ಕ.ಪ.ಪ.ಮೀ.ವಿ.ವಿ ಬೀದರ ರವರ ಮಾಹಿತಿಗಾಗಿ.
2. ಕುಲಸಚಿವರು, ಕ.ಪ.ಪ.ಮೀ.ವಿ.ವಿ ಬೀದರ ರವರ ಮಾಹಿತಿಗಾಗಿ.
3. ಹಣಕಾಸು ನಿಯಂತ್ರಣಾಧಿಕಾರಿಗಳು, ಕ.ಪ.ಪ.ಮೀ.ವಿ.ವಿ ಬೀದರ ರವರ ಮಾಹಿತಿಗಾಗಿ.
4. ಕುಲಪತಿಗಳ ಹಿರಿಯ ಆಪ್ತ ಕಾರ್ಯದರ್ಶಿ ಗ್ರೇಡ್–1, ಕಪಪಮೀವಿವಿ, ಬೀದರ ರವರ ಮಾಹಿತಿಗಾಗಿ
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಹೆಬ್ಬಾಳ, ಬೆಂಗಳೂರು ರವರ ಮಾಹಿತಿಗಾಗಿ.
6. ಡೀನ್/ಆವರಣದ ಮುಖ್ಯಸ್ಥರು, ಪಶುವೈದ್ಯಕೀಯ/ ಹೈನುಗಾರಿಕಾ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು ರವರ ಮಾಹಿತಿಗಾಗಿ.
7. ಕಚೇರಿ ಕಡತ.

**ಪ್ರಕಟಣಾ ಫಲಕಕ್ಕೆ:–**

- ಡೀನ್/ಆವರಣದ ಮುಖ್ಯಸ್ಥರು, ಪಶುವೈದ್ಯಕೀಯ/ ಹೈನುಗಾರಿಕಾ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು.
- ಮೀನುಗಾರಿಕಾ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳ/ಹೆಸರಘಟ್ಟ, ಬೆಂಗಳೂರು.
- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಹೆಬ್ಬಾಳ, ಬೆಂಗಳೂರು (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ಹಿರಿಯ ಕ್ಷೇತ್ರ ಅಧೀಕ್ಷಕರು, ಜಿ.ಕೆ.ವಿ.ಕೆ, ಬೆಂಗಳೂರು (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ವ್ಯವಸ್ಥಾಪಕರು, ಬಿ.ಬಿ.ಎಂ.ಪಿ., ವಲಯ ಕಛೇರಿ, ಬ್ಯಾಟರಾಯನಪುರ/ಕೊಡಗೆಹಳ್ಳಿ/ಹೆಬ್ಬಾಳ/ಸಂಜಯನಗರ (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ವ್ಯವಸ್ಥಾಪಕರು, ಎ.ಪಿ.ಎಂ.ಸಿ. ಯಾರ್ಡ್, ಯಶವಂತಪುರ (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ವ್ಯವಸ್ಥಾಪಕರು, ಕಂದಾಯ ಇಲಾಖೆ, ಮಿನಿ ವಿಧಾನ ಸೌಧ, ಯಲಹಂಕ (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ವ್ಯವಸ್ಥಾಪಕರು, ರೈತರ ಸಂತೆ ಕಛೇರಿ, ಯಲಹಂಕ (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ವ್ಯವಸ್ಥಾಪಕರು, ಟಿ.ಎ.ಪಿ.ಸಿ.ಎಂ.ಎಸ್., ಸಹಕಾರನಗರ (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ವ್ಯವಸ್ಥಾಪಕರು, ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಮಂಡಳಿ, ಸಹಕಾರನಗರ (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ).
- ಹೈಡೀಲ್ಸ್ ಟೆಕ್ನಾಲಾಜೀಸ್, ಬೀದರ (ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ).